ಈ ಕವನ ಸಂಕಲನ ಬಿಡಿಬಿಡಿಯಾಗಿ ಹಾಗೂ ಕವಿಯ ಸಮಗ್ರ ಸಂಕಲನಗಳಲ್ಲಿ ಸೇರಿ ಈವರೆಗೆ ನಲವತ್ತಕ್ಕೂ ಹೆಚ್ಚು ಮುದ್ರಣಗಳನ್ನು ಕಂಡಿದೆ; ಈ ಸಂಕಲನದ ಎಪ್ಪತ್ತು ಸಾವಿರಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗಿರುವುದು ಕೂಡ ಇಲ್ಲಿನ ಕವಿತೆಗಳು ನಿರಂತರವಾಗಿ ಕನ್ನಡಿಗರ ಪ್ರಜ್ಞೆಯನ್ನು ರೂಪಿಸುತ್ತಿರುವುದನ್ನು ಸೂಚಿಸುತ್ತದೆ.

ಈ ಸಂಕಲನದ 'ಇಕ್ರಲಾ ವದೀರ್ಲಾ ಈ ನನ್ ಮಕ್ಕಳ ಚರ್ಮ ಎಬ್ರಲಾ' ಎಂಬ ಸ್ಫೋಟ ಹುಟ್ಟಿದ ಹಿನ್ನೆಲೆಯ ಬಗ್ಗೆ ಸಿದ್ಧಲಿಂಗಯ್ಯನವರೇ ಮುಂದೊಮ್ಮೆ ಹೇಳಿದ ಅಂಶಗಳು ಕುತೂಹಲಕರವಾಗಿವೆ: ಆಗ ಭರತ್ ಜುಂಝುನ್ವಾಲ ಎಂಬ ಸಮಾಜವಿಜ್ಞಾನಿ ಬೆಂಗಳೂರಿನ ಸ್ಲಮ್ಮೊಂದರಲ್ಲೇ ವಾಸಿಸುತ್ತಾ, ಅಲ್ಲಿನ ಸ್ಥಿತಿಗತಿಗಳನ್ನು ಅರಿಯುತ್ತಾ, ಅಲ್ಲಿಗೆ ಲೇಖಕರನ್ನೂ ಚಿಂತಕರನ್ನೂ ಕರೆಯುತ್ತಿದ್ದರು. ಅವರೊಮ್ಮೆ ಡಿ. ಆರ್.ನಾಗರಾಜ್, ಶೂದ್ರ ಶ್ರೀನಿವಾಸ್, ಸಿದ್ಧಲಿಂಗಯ್ಯ ಮೊದಲಾದವರನ್ನು ಕರೆದುಕೊಂಡು ತಮಿಳುನಾಡಿನ ಹಳ್ಳಿಯೊಂದಕ್ಕೆ ಹೋದರು; ಅವರೆಲ್ಲಾ ಆ ಹಳ್ಳಿಯಲ್ಲೇ ಇದ್ದು ಅಲ್ಲಿನ ಸ್ಥಿತಿಗತಿಗಳನ್ನು ಹತ್ತಿರದಿಂದ ಅಧ್ಯಯನ ಮಾಡಬೇಕಾಗಿತ್ತು. ಈ ಕ್ಯಾಂಪಿಗೆ ಒಂದು ದಿನ ತಮಿಳುನಾಡಿನ ದಲಿತ ಸಮುದಾಯದ ಜನ ಬಂದು ತಮ್ಮ ದಾರುಣ ಸ್ಥಿತಿಗತಿಗಳನ್ನೂ, ತಮ್ಮ ಮೇಲೆ ಮೇಲುಜಾತಿಗಳು ನಡೆಸುತ್ತಿದ್ದ ಹಲ್ಲೆಗಳನ್ನೂ ಕುರಿತು ಹೇಳಿಕೊಳ್ಳಲಾರಂಭಿಸಿದರು. ಇದನ್ನು ಕೇಳಿಸಿಕೊಳ್ಳುತ್ತಿದ್ದ ಸಿದ್ಧಲಿಂಗಯ್ಯನವರಿಗೆ ತಮ್ಮ ಸಮುದಾಯದ ಜನರ ಮೇಲೆ ನಡೆಯುತ್ತಿದ್ದ ಹಲ್ಲೆ ಕುರಿತು ಒಳಗಿನಿಂದ ಒದ್ದುಕೊಂಡು ಬರುತ್ತಿದ್ದ ಸಿಟ್ಟು, ಆ ಹಲ್ಲೆಗೆ ಪ್ರತಿಯಾಗಿ ಏನೂ ಮಾಡಲಾಗದ ಅಸಹಾಯಕತೆ – ಎರಡೂ ಸೇರಿ 'ಇಕ್ರಲಾ ವದೀರ್ಲಾ...' ಸ್ಫೋಟ ಹುಟ್ಟಿತು. ಕನ್ನಡ ಕಾವ್ಯಕ್ಕೆ 'ಅಕಾವ್ಯ' ಭಾಷೆಯನ್ನು ಪರಿಚಯಿಸಿದ ಖ್ಯಾತಿ ಪಡೆದ ಈ ಪದ್ಯದ ಅರ್ಥಗಳು, ಸಂದೇಶಗಳು ತಲೆಮಾರಿನಿಂದ ತಲೆಮಾರುಗಳಿಗೆ ಹಬ್ಬುತ್ತಲೇ ಇವೆ. ನೂರಾರು ಕವಿಗಳಿಂದ ಹೊಸ ಕವಿತೆಗಳನ್ನು ಬರೆಸಿವೆ, ಬರೆಸುತ್ತಲೇ ಇವೆ.

ಈ ಥರದ ಸ್ಫೋಟಕ ಪದ್ಯಗಳ ಹಿನ್ನೆಲೆಯಲ್ಲಿ ಸಿದ್ಧಲಿಂಗಯ್ಯನವರ ಸಾಮಾಜಿಕ ಚಟುವಟಿಕೆಗಳ ಪ್ರೇರಣೆಯೂ ಇತ್ತು. ವಿದ್ಯಾರ್ಥಿಯಾಗಿದ್ದಾಗಲೇ ಸಂಜೆ ನಾಲ್ಕು ಗಂಟೆಗಳ ಕಾಲ ಸೋಪ್ ಫ್ಯಾಕ್ಟರಿಯಲ್ಲಿ ದುಡಿಯುತ್ತಿದ್ದ ಅವರು ನಂತರ ಗೆಳೆಯರೊಡಗೂಡಿ ಗೋಪಾಲಸ್ವಾಮಿ ಅಯ್ಯರ್ ಕಾಲನಿಯಲ್ಲಿ ಶಾಲೆ ಬಿಟ್ಟ ಮಕ್ಕಳಿಗಾಗಿ ರಾತ್ರಿಶಾಲೆಯನ್ನು ತೆರೆದರು. ಅಷ್ಟೊತ್ತಿಗಾಗಲೇ ದಾರಿ ತಪ್ಪುತ್ತಿದ್ದ ಜನ್ನಿ, ಸಿ. ಬಸವಲಿಂಗಯ್ಯ ಕೂಡ ಆ ರಾತ್ರಿಶಾಲೆ ಸೇರಿ, ಮುಂದೆ ದೊಡ್ಡ ರಂಗಕರ್ಮಿಗಳಾಗಿ ಬೆಳೆದರು. ಈ ಥರದ ಹುಡುಗರಿಂದ ಹಿಡಿದು ಕಮ್ಯುನಿಸ್ಟ್ ಪಕ್ಷದ ಎಳೆಯ ಕಾರ್ಯಕರ್ತರವರೆಗೂ ಈ ಶಾಲೆ ಸೇರಿ ಬೆಳೆದು ಒಳ್ಳೆಯ ನಾಯಕರಾದವರಿದ್ದಾರೆ. ಈ ಶಾಲೆಯಲ್ಲಿ ಉಚಿತವಾಗಿ ಪಾಠ ಮಾಡಲು ನಾಡಿನ ಪ್ರಸಿದ್ಧ ಲೇಖಕರು, ಮೇಷ್ಟ್ರುಗಳು ಬರುತ್ತಿದ್ದರು. ಬೆಂಗಳೂರಿನ ನವರಂಗ್ ಬಳಿಯಲ್ಲಿ ಡಾಬಾದಂತಿದ್ದ ಪಂಜಾಬ್ ಶಾಹಿ ಹೋಟೆಲಿನಲ್ಲಿ ಪ್ರತಿ ಭಾನುವಾರ ಆಕ್ಟಿವಿಸ್ಟ್ ಕಾರ್ಯಕರ್ತರು ದಿನವಿಡೀ ಸಿದ್ಧಲಿಂಗಯ್ಯನವರ ಜೊತೆ ಚರ್ಚಿಸುತ್ತಾ, ಸೈದ್ಧಾಂತಿಕ ಸ್ಪಷ್ಟತೆ ಪಡೆಯುತ್ತಿದ್ದರು.

ಬರಬರುತ್ತಾ ಈ ರಾತ್ರಿಶಾಲೆಗಳು ಬೆಂಗಳೂರಿನ ಮಾವಳ್ಳಿಯಲ್ಲಿ ಹಾಗೂ ಕೆಲವು ಸ್ಲಮ್ಮುಗಳಲ್ಲೂ ಶುರುವಾದವು. ಬಡ ಹುಡುಗಿಯರು ರಾತ್ರಿಶಾಲೆಗಳನ್ನು ಸೇರಿ ದಿಟ್ಟ ಮುಂದಾಳುಗಳಾಗಿ ರೂಪುಗೊಳ್ಳತೊಡಗಿದರು. ಇಂಥ ಹದಿನೈದಕ್ಕೂ ಹೆಚ್ಚು ರಾತ್ರಿಶಾಲೆಗಳಿದ್ದವು. ಈ ಶಾಲೆಗಳ ಉಸ್ತುವಾರಿ ಹೊತ್ತ ಕಾರ್ಯಕರ್ತರು ಶಾಲೆಯಿಂದ ಶಾಲೆಗೆ ನಡೆದೇ ಹೋಗುತ್ತಿದ್ದರು. ಈ ಶಾಲೆಗಳು ಪಠ್ಯಪುಸ್ತಕಗಳ ಶಿಕ್ಷಣದ ಜೊತೆಗೆ ಜಾತಿಪದ್ಧತಿಯನ್ನು ಪ್ರಶ್ನಿಸುವ, ಸಮಾನತೆಯ ಮನಸ್ಸಿನ ಹುಡುಗ ಹುಡುಗಿಯರನ್ನೂ ಹುಟ್ಟು ಹಾಕಿದವು. ಇಂಥ ದಲಿತ ಹುಡುಗಿಯರ ತಂಡವೊಂದು